ತಲುಪಬಹುದು. ನಾನೂ ಅದೇ ರೂಟಲ್ಲಿ ಬಾಡಾಗೆ ಹೋಗಲಿಕ್ಕುಂಟು, ಬನ್ನಿ ಬಸ್ಸ್ಟ್ಯಾಂಡಿಗೆ ಹೋಗೋಣ' ಎಂದಿದ್ದರು. ನಾನು, 'ಅಘನಾಶಿನಿಯಿಂದ ಒಳಗೆ ಮತ್ತೆ ಅರ್ಧ ಕಿಲೋಮೀಟರ್ ಹೋಗಬೇಕಾಗಿದೆ, ಹಾಗಾಗಿ ಆಟೋ ಹಿಡಿಯುತ್ತೇನೆ. ನಿಮ್ಮ ಕಾಳಜಿಗೆ ಧನ್ಯವಾದಗಳು' ಎಂದಿದ್ದೆ. 'ಆಗಬಹುದು ಮಾರಾಯ್ರೆ, ನಿಮ್ಮ ಅನುಕೂಲ' ಎಂದು ಅವರು ರಸ್ತೆಗೆ ಕಾಲಿಟ್ಟಿದ್ದರು. ನಮ್ಮಿಬ್ಬರ ಸಂಭಾಷಣೆಯ ಮಧ್ಯದಲ್ಲಿ ನಾನು ಮಾತನಾಡಿದ್ದ ಆಟೋದಲ್ಲಿ ಬೇರೆ ಯಾರೋ ಕುಳಿತು ಹೋಗಿದ್ದರು. ಆ ಜಾಗಕ್ಕೆ ಬಂದ ಮತ್ತೊಂದು ಆಟೋದವನೂ ಮುನ್ನೂರು ರೂಪಾಯಿಯೇ ಹೇಳಿದ್ದರಿಂದ ಮರುಮಾತನಾಡದೆ ಆಟೋದಲ್ಲಿ ಕುಳಿತಿದ್ದೆ.

'ಅಘನಾಶಿನಿಯಲ್ಲಿ ಯಾರ ಮನೆಗೆ ಹೋಗಲಿಕ್ಕುಂಟು ಸಾರ್, ನನ್ನದೂ ಅಘನಾಶಿನಿನೇ' ಪ್ರಯಾಣ ಪ್ರಾರಂಭವಾದ ಐದು ನಿಮಿಷಗಳ ಬಳಿಕ ಕೇಳಿದ್ದ ಆಟೋ ಡ್ರೈವರ್. 'ಜಿ.ವಿ. ಹೆಗಡೆ ಅಂದರೆ ಗೋವಿಂದ ವೆಂಕಟರಮಣ ಹೆಗಡೆಯವರ ಮನೆಗೆ. ಅಘನಾಶಿನಿಯಿಂದ ಬಲಕ್ಕೆ ಒಂದಿಷ್ಟು ಒಳಕ್ಕೆ ಹೋಗಬೇಕು. ಬಹಳ ವರ್ಷಗಳ ಹಿಂದೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಎಂ.ಎ. ಓದುವಾಗ ಜನರಲ್ ಹಾಸ್ಟೆಲ್‌ನಲ್ಲಿ ನನ್ನ ರೂಮ್‌ಮೇಟ್ ಆಗಿದ್ದರು. ಏನೋ ಕಾರಣಕ್ಕೆ ಮಧ್ಯದಲ್ಲಿ ಬಿಟ್ಟು ಬಂದರು. ಅವರ ಮಗ ನಾರಾಯಣ ಹೆಗಡೆ ಎನ್ನುವವರು ಫೋನ್ ಮಾಡಿದ್ದರು. ಜಿ.ವಿ. ಹೆಗಡೆಯವರು ಹುಷಾರಿಲ್ಲದೆ ಮಲಗಿದ್ದಾರಂತೆ. ನನ್ನನ್ನು ನೋಡಲೇಬೇಕು ಅಂತ ಹಟ ಹಿಡಿದಿದ್ದರಂತೆ. ನನಗೆ ಒಳ್ಳೆಯ ರೂಮ್ ಮೇಟ್ ಆಗಿದ್ದವರು. ಹಾಗಾಗಿ ನೋಡಿ ಹೋಗೋಣ ಎಂದು ಬಂದು ಬಿಟ್ಟೆ' ಎಂದೆ. ಆಟೋ ಡ್ರೈವರ್ ಹಿಂತಿರುಗಿ ನನ್ನ ಕಡೆಗೊಮ್ಮೆ ನೋಡಿ 'ಓಹ್ ನಮ್ಮ ಜಿ.ವಿ. ಹೆಗಡೆಯವರ ಮನೆಗ? ಅಂಥ ಖಡಕ್ ಮನುಷ್ಯರನ್ನ ನನ್ನ ಜೀವಮಾನದಲ್ಲಿ ಬೇರೆಲ್ಲೂ ನೋಡಿಲ್ಲ ಬಿಡಿ ಸಾರ್. ನ್ಯಾಯ ಅಂದ್ರೆ ನ್ಯಾಯ ಪುಣ್ಯಾತ್ಮರದ್ದು. ಐದೆಕರೆ ಅಡಿಕೆ ತೋಟ. ನಮ್ಮ ಏರಿಯಾದಲ್ಲಿ ಅವರೇ ಏ ಒನ್ ಅಡಿಕೆ ಬೆಳೆಗಾರರು. ಅವರ ಮೂಲ ಮಂಗಳೂರಂತೆ. ಅವರಪ್ಪಂದು ಮಂಗಳೂರಿನ ಬಂದರಿನಲ್ಲಿ ದೊಡ್ಡ ಅಡಿಕೆ ಮಂಡಿ ಇತ್ತಂತೆ. ತಂದೆ ಸತ್ತ ನಂತರ ವ್ಯಾಪಾರ ಮೋಸ ಅಂತ ವ್ಯಾಪಾರ ಬಿಟ್ಟು ವಕೀಲ ವೃತ್ತಿಯನ್ನು ನಡೆಸಿದರಂತೆ. ನಂತರ ಇಲ್ಲಿನ ವಾತಾವರಣ ತುಂಬಾನೇ ಇಷ್ಟವಾಗಿ ಅಡಿಕೆ ತೋಟ ಕೊಂಡು, ಒಳ್ಳೆ ಮನೆಯನ್ನು ಕಟ್ಟಿಕೊಂಡು ಇಲ್ಲಿಯೇ ನೆಲೆಸಿಬಿಟ್ಟರು. ಇವರು ಸುತ್ತಮುತ್ತಲಿನ ಸಹಕಾರ ಸಂಘಗಳಲ್ಲಿ ಒಂದಿಷ್ಟೂ ಅವ್ಯವಹಾರ ಆಗದಂತೆ ನೋಡಿಕೊಂಡ್ರು. ನಮ್ಮ ಆಟೋದವರಿಗಾಗಲೀ, ತದಡಿಯಲ್ಲಿ ಮೀನು ವ್ಯಾಪಾರಿಗಳ ಕೆಳಗೆ ಕೆಲಸ ಮಾಡುವ ಕೂಲಿಕಾರರಿಗಾಗಲೀ, ನಮ್ಮ ಏರಿಯಾದ ಮೀನುಗಾರರಿಗಾಗಲೀ ಒಂದಿಷ್ಟು ಅನ್ಯಾಯವಾದರೂ ಇವರು ಏಕ್ದಂ ಮುಂದೆ ನಿಂತು ನ್ಯಾಯ ಕೊಡಿಸುತ್ತಿದ್ದರು. ಈ ಎರಡು ವರ್ಷಗಳಿಂದೀಚೆಗೆ ಮೆತ್ತಗಾಗಿದ್ದಾರೆ. ಹೊರಗಡೆ ಓಡಾಡುವುದನ್ನು ತುಂಬಾ ಕಡಿಮೆ ಮಾಡಿಕೊಂಡಿದ್ದಾರೆ. ಜಿ.ವಿ. ಹೆಗಡೇರ ಮಗ ನಾರಾಯಣ ಹೆಗಡೆ ಕೂಡಾ ತಂದೆಯಷ್ಟೇ ಒಳ್ಳೆಯವರು. ಶಿರಸಿ, ಸಿದ್ದಾಪುರ, ಹೊನ್ನಾವರ, ಕುಮಟಾ, ಕಾರವಾರ ಕೋರ್ಟುಗಳಲ್ಲಿ ದಕ್ಷ ಲಾಯರ್ ಎಂಬ ಹೆಸರಿದೆ. ತೀರಾ ಬಡವರ ಹತ್ತಿರ ಫೀಜು ತೆಗೆದುಕೊಳ್ಳದೆ ಕೇಸು ನಡೆಸಿಕೊಡುತ್ತಾರೆ.' ಡ್ರೈವರ್ ಕಡೆಯಿಂದ ಸಣ್ಣದಾಗಿ ಎಣ್ಣೆಯ ಘಮಲು ತೇಲಿ ಬಂದಿತ್ತು. ಅದು ನನ್ನ ಅರಿವಿಗೆ ಬಂದಿರುವುದು ಆತನಿಗೆ ಗೊತ್ತಾಗಿರಬೇಕು. 'ಮಳೆಗಾಲದಲ್ಲಿ ಸ್ವಲ್ಪ ಹಾಕಿಕೊಂಡರೆ ಕೆಲಸದಲ್ಲಿ ಉತ್ಸಾಹ ಇರುತ್ತದೆ ಸಾರ್. ಹಾಗಂತ ಯಾವ ಆಟೋ ಡ್ರೈವರೂ ಲಿಮಿಟ್ ಮೀರಿ ಕುಡಿಯೋದಿಲ್ಲ. ಆಟೋ ಡ್ರೈವರ್‌ಗಳು ಆಕ್ಸಿಡೆಂಟ್ ಮಾಡಿದ ಘಟನೆಗಳು ಇಲ್ಲಿ ಇಲ್ಲವೇ ಇಲ್ಲ. ಆರಾಮ ಕುಂತಿರಿ, ನಲವತ್ತು ನಿಮಿಷದಲ್ಲಿ ನಿಮ್ಮನ್ನು ಜಿ.ವಿ. ಹೆಗಡೆಯವರ ಮನೆಗೆ ಸೇಫಾಗಿ ತಲುಪಿಸುತ್ತೇನೆ. ಓಹ್ ಮಳೆ ನಿಂತು ಹೋಗಿ ಬಿಸಿಲು ಕಾಯುತ್ತಿದೆ. ಇನ್ನು ಸಂಜೆಯವರೆಗೂ ಬಿಡುವ ಕೊಡುವ ಸೂಚನೆ. ಮತ್ತೆ ರಾತ್ರಿಗೆ ಮಳೆ ಹಿಡಿಯುವುದು ಗ್ಯಾರಂಟಿ' ಆತ ಡ್ರೈವ್ ಮಾಡುತ್ತಿದ್ದ ರೀತಿಯಿಂದಲೇ ಆತನ ಮಾತುಗಳಲ್ಲಿ ನಂಬಿಕೆ ಹುಟ್ಟಿತ್ತು.

ಈ ಗೋವಿಂದ ವೆಂಕಟರಮಣ ಹೆಗಡೆ ಯೂನಿವರ್ಸಿಟಿ ಹಾಸ್ಟೆಲ್‌ನಲ್ಲಿ ನನ್ನ ರೂಂ ಮೇಟ್ ಆಗಿದ್ದವನು. ನಾನು ಎಂ.ಎ. ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿದ್ದರೆ ಆತ ಎಂ.ಎ. ಇಂಗ್ಲಿಷ್